Misc. No.35/2019
RW. 1

**ಆರ್.ಡಬ್ಲ್ಯೂ :1**

**ದಿನಾಂಕಃ 28-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ಮತ್ತು 5 ನೇ ಎದುರುದಾರರ ಪರವಾಗಿ ಶ್ರೀಮತಿ ಪಿ.ಕೆ.ಟಿ. ವಕೀಲರಿಂದಃ-**

5. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಈ ಜಮೀನಿಗೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು ನಾನೇ ನೋಡಿಕೊಳ್ಳುತ್ತೇನೆ, ಆದ್ದರಿಂದ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸರ್ವೆ ನಂಃ 533/1 ಅ ರ ಜಮೀನು 1995 ರಿಂದ 2008 ರ ವರೆಗೆ ಪಾಂಡುರಂಗ ಗುಣಾ ನಾಯ್ಕ ರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಮೊದಲಿಗೆ ಪಾಂಡುರಂಗ ಗುಣಾ ನಾಯ್ಕ ಮತ್ತು ಬುಧಿಯಾ ನಾಯ್ಕ ರವರ ಹೆಸರಿನಲ್ಲಿದ್ದು, ಆ ನಂತರ ನಾಲ್ಕು ಜನರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ 1988-1989 ರ ಪಹಣಿ ಪತ್ರಿಕೆಯನ್ನು ತೋರಿಸಿ, ಅದರಲ್ಲಿ ಪಾಂಡುರಂಗ ಗುಣಾ ನಾಯ್ಕ ರವರ ಹೆಸರು ಇರುತ್ತದೆ ಎಂದರೆ ಸರಿ. ಅದೇ ರೀತಿ 2000-2001 ರ ಪಹಣಿ ಪತ್ರಿಕೆಯನ್ನು ತೋರಿಸಿ, ಅದರಲ್ಲಿಯೂ ಸಹ ಪಾಂಡುರಂಗ ಗುಣಾ ನಾಯ್ಕ ರವರ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಗಳನ್ನು ನಿ.ಆರ್-9 ಮತ್ತು 10 ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಕಂದಾಯ ರಶೀದಿಯನ್ನು ತೋರಿಸಿ, ಪಾಂಡುರಂಗ ಗುಣಾ ನಾಯ್ಕ ರವರು ಮೃತರಾದ ನಂತರ, ಸರ್ವೆ ನಂಃ 533/1 ಅ ರ ಜಮೀನಿಗೆ ಆತನ ಮಗ ಸದಾನಂದ ಪಾಂಡುರಂಗ ನಾಯ್ಕ ರವರು ಕಂದಾಯ ಭರಿಸುತ್ತಿದ್ದರು ಎಂದರೆ ಸಾಕ್ಷಿಯು ಜಂಟಿ ಖಾತೆ ಇದ್ದುದ್ದರಿಂದ ಯಾರು ಬೇಕಾದರೂ ತುಂಬುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಕಂದಾಯ ರಶೀದಿಯನ್ನು ನಿ.ಆರ್-11 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸರ್ವೆ ನಂಃ 269 ಅ/6 ರ ಪಹಣಿ ಪತ್ರಿಕೆಯನ್ನು ತೋರಿಸಿ, ಕಾಲಂ ನಂಃ 10 ರಲ್ಲಿ ಮ್ಯುಟೇಷನ ನಂಃ 6944 ಎಂದು ಹಾಗೂ ಕಾಲಂ ನಂಃ11 ರಲ್ಲಿ ಪಾಂಡುರಂಗ ಗುಣಾ ನಾಯ್ಕ ರವರ ಸ್ವಯಂ ಕುಳ ಹಕ್ಕು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯನ್ನು ನಿ.ಆರ್. 12 ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಸರ್ವೆ ನಂಃ 269 ಅ/10 ರ ಪಹಣಿ ಪತ್ರಿಕೆಯನ್ನು ತೋರಿಸಿ, ಕಾಲಂ ನಂಃ 10 ರಲ್ಲಿ ಮ್ಯುಟೇಷನ ನಂಃ 6944 ಎಂದು ಹಾಗೂ ಕಾಲಂ ನಂಃ 11 ರಲ್ಲಿ ಪಾಂಡುರಂಗ ಗುಣಾ ನಾಯ್ಕ

ರವರ ಸ್ವಯಂ ಕುಳ ಹಕ್ಕು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯನ್ನು ನಿ.ಆರ್.13 ಎಂದು ಗುರುತಿಸಲಾಯಿತು. ಮ್ಯುಟೇಷನ ನಂಃ 6944 ನ್ನು ಸಾಕ್ಷಿಗೆ ತೋರಿಸಿ, ಅದರಲ್ಲಿ ಸರ್ವೆ ನಂಃ 269 ಅ/6, 269 ಅ/10, 533/1 ಅ ಗಳನ್ನು ಹೊರತುಪಡಿಸಿ, ಉಳಿದ ಜಮೀನುಗಳು ಪಾಂಡುರಂಗ ಗುಣಾ ನಾಯ್ಕ ರವರಿಗೆ ಮಂಜೂರಾಗಿದೆ ಎಂದು ಟಿ.ಎನ್.ಸಿ ನಃ 4184+5456 ದಿಃ 20-07-1982 ಎಂದು ನಮುದಾಗಿರುತ್ತದೆ ಎಂದರೆ ಸಾಕ್ಷಿಯು ಜಂಟಿ ಖಾತೆಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿ.ಆರ್-14 ಎಂದು ಗುರುತಿಸಲಾಯಿತು.

8. ಸರ್ವೆ ನಂಃ 264 ಅ/1 ರ ಜಮೀನಿನ ಪರಿಹಾರದ ಮೊತ್ತದಲ್ಲಿ ¼ ಭಾಗ ಮಾಡಲು ತಕರಾರು ಇರುವುದಿಲ್ಲ. ಅದೇ ರೀತಿ ಸರ್ವೆ ನಂಃ 116, 253, 254, 246 ಸಿ, 256 ಸಿ ರ ಜಮೀನುಗಳಿಗೆ ಮಾತ್ರ ಪರಿಹಾರದ ಮೊತ್ತದಲ್ಲಿ ¼ ಭಾಗ ಪಡೆಯಲು ಹಕ್ಕುಳ್ಳವನಾಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂಃ 269 ಅ/6, 269 ಅ/10, 533/1 ಅ ರ ಜಮೀನುಗಳಿಗೆ ಭೂ ನ್ಯಾಯ ಮಂಡಳಿಯ ಆದೇಶದಂತೆ ಪಾಂಡುರಂಗ ಗುಣಾ ನಾಯ್ಕ ರವರು ಮಾತ್ರ ಹಕ್ಕುಳ್ಳವನಾಗಿರುತ್ತಾರೆ ಎಂದರೆ ಸರಿಯಲ್ಲ. ಆ ಸರ್ವೆ ನಂಬರ್ ಗಳಲ್ಲಿರುವ ಮನೆಯು ಸಹ ಪಾಂಡುರಂಗ ಗುಣಾ ನಾಯ್ಕ ರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಬುಧಿಯಾ ಗುಣಾ ನಾಯ್ಕ ರವರು ಮಿಲಟರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ, ಮೇಲೆ ಹೇಳಿದ ಮೂರು ಸರ್ವೆ ನಂಬರ್ ಗಳಲ್ಲಿ ಅವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬುಧಿಯಾ ಗುಣಾ ನಾಯ್ಕ ರವರಿಗೆ ಸಹಾಯವಾಗಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 11 ರಿಂದ 17 ನೇ ಎದುರುದಾರರ ಪರವಾಗಿ ಶ್ರೀ ಆರ್.ಎಸ್.ಹೆಚ್ ವಕೀಲರಿಂದಃ-**

9. ಬುಧಿಯಾ ಗುಣಾ ನಾಯ್ಕ ಹಾಗೂ ಆನಂದಿ ಗಂಡ-ಹೆಂಡತಿಯರು ಎಂದರೆ ಸರಿ. ಅವರಿಗೆ ಎರಡು ಜನ ಗಂಡು ಮಕ್ಕಳು ಅಂದರೆ ವಾಸುದೇವ ಮತ್ತು ಮಹಾದೇವ ಹಾಗೂ ನಾಲ್ಕು ಹೆಣ್ಣು ಮಕ್ಕಳು ಅಂದರೆ ಪಾರ್ವತಿ, ಮಾಲಿ, ದೇವಕಿ ಮತ್ತು ಲೀಲಾ ಎಂದರೆ ಸರಿ. ಅವರ ಪೈಕಿ ಲೀಲಾ ಮೃತಪಟ್ಟಿರುತ್ತಾರೆ ಎಂದರೆ ಸರಿ. ಕಾನೂನಿನ ಪ್ರಕಾರ ಬುಧಿಯಾ ಗುಣಾ ನಾಯ್ಕ ಹಾಗೂ ಆನಂದಿಯವರ ಆಸ್ತಿಯಲ್ಲಿ ಒಟ್ಟು ಆರು ಪಾಲುಗಳು ಆಗಬೇಕು ಎಂದರೆ ಸರಿ. ಬುಧಿಯಾ ಗುಣಾ ನಾಯ್ಕ ರವರಿಗೆ ಆಸ್ತಿಯಲ್ಲಿ ¼ ಭಾಗ ಉಂಟು ಹಾಗೂ ಸದರಿ ¼ ನೇ ಅಂಶದಲ್ಲಿ ಆರು ಭಾಗ

ಎಂದರೆ ಸರಿ. ತಲಾ ಆರು ಜನ ಮಕ್ಕಳು 1/6 ರಂತೆ ಭಾಗ ಪಡೆಯುತ್ತಾರೆ ಎಂದರೆ ಸರಿ. ಆನಂದಿಗೆ ಸೇರಿದ ಮನೆ ದೇವಕಿಗೆ ಯಾನೆ ಜ್ಯೋತಿಯವರಿಗೆ ಸೇರಬೇಕು ಎಂದರೆ ಸರಿ.

**ಪಾಟೀ ಸವಾಲುಃ 18 ರಿಂದ 23 ನೇ ಎದುರುದಾರರ ಪರವಾಗಿ,ಶ್ರೀ ಕೆ.ಆರ್.ಡಿ ವಕೀಲರಿಂದಃ–**

10. ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದಂತೆ 4 ನೇ ಎದುರುದಾರರಾದ ರುಕ್ಮಂಗಲಾ ತಾಕ್ಯಾ ನಾಯ್ಕ ಹಾಗೂ ಬುಧಿಯಾ ಗುಣಾ ನಾಯ್ಕ ರವರು ಅಸಲು ದಾವಾ ನಂಃ 02/1999 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಿಠ್ಠಲ ಗುಣಾ ನಾಯ್ಕ, ಸದಾನಂದ ಪಾಂಡುರಂಗ ನಾಯ್ಕ ಹಾಗೂ ರಘುವೀರ ಪಾಂಡುರಂಗ ನಾಯ್ಕ ರವರನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದರು ಎಂದರೆ ಸರಿ. ಅವರ ಪೈಕಿ ಸದಾನಂದ ಪಾಂಡುರಂಗ ನಾಯ್ಕ ರವರು ತೀರಿಕೊಂಡ ಕಾರಣ, ಆತನ ಹೆಂಡತಿಯಾದ ಲಕ್ಷ್ಮಿ ಸದಾನಂದ ನಾಯ್ಕ ರವರನ್ನು ಸದರಿ ದಾವೆಯಲ್ಲಿ ಪ್ರತಿವಾದಿ 2(ಅ) ಎಂದು ಸೇರಿಸಲಾಯಿತು ಎಂದರೆ ಸರಿ. ಸದರಿ ದಾವೆಯಲ್ಲಿ ರುಕ್ಮಂಗಲಾ ತಾಕ್ಯಾ ನಾಯ್ಕ ರವರಿಗೆ ¼ ಅಂಶ, ಬುಧಿಯಾ ಗುಣಾ ನಾಯ್ಕ ರವರಿಗೆ ¼ ಅಂಶ, ವಿಠ್ಠಲ ಗುಣಾ ನಾಯ್ಕ ರವರಿಗೆ ¼ ಅಂಶ ಮತ್ತು ಪಾಂಡುರಂಗ ನಾಯ್ಕ ರವರಿಗೆ ¼ ಅಂಶ ಹಕ್ಕು ಕೇಳಿದ್ದೆವು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯ ತೀರ್ಪಿನ ವಿರುದ್ಧ ಪ್ರತಿವಾದಿ 2(ಅ) ಮತ್ತು 3 ನೇ ಪ್ರತಿವಾದಿ ಆರ್.ಎ. ನಂಃ 26–2008 ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ಅಪಿಲ್ ಸಹ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಆರ್.ಎಸ್.ಎ ದಾಖಲಾಗಿ, ಅದು ಸಹ ವಜಾಗೊಂಡಿರುತ್ತದೆ ಎಂದರೆ ಸರಿ. ಅಸಲು ದಾವಾ ನಂಃ 02/1999 ನ್ನು ಸ್ವಾಧೀನಪಡಿಸಿಕೊಂಡ ಜಮೀನಿಗೆ ಮಾಡಲಾಗಿರುತ್ತದೆ ಹೊರತು ಮನೆಗಳಿಗೆ ಅಲ್ಲ ಎಂದರೆ ಸರಿ. ಜಮೀನಿಗೆ ಬರತಕ್ಕ ಪರಿಹಾರದ ಮೊತ್ತದಲ್ಲಿ ¼ ಅಂಶ ಬರಬೇಕು ಎಂದರೆ ಸರಿ. ಅದರಲ್ಲಿರುವ ಮನೆಗೆ ಸಂಬಂಧಿಸಿದಂತೆ ಯಾವುದೇ ಪರಿಹಾರವನ್ನು ಕೇಳಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ. ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ